**ಅಸಲು ದಾವಾ ನಂಃ 40/2017**
**ಪಿ.ಡಬ್ಲ್ಯೂಃ 1,**

**<u>ದಿನಾಂಕ :22-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟಿ ಸವಾಲು :- ಶ್ರೀ. ಜಿ.ಜಿ.ಕೆ. ಪ್ರತಿವಾದಿ ಪರ ವಕೀಲರಿಂದ :</u>**

ನಮ್ಮ ತಂದೆಗೆ ನಾನು ಮತ್ತು ಯಾಕುಬ ಇಬ್ಬರೇ ಮಕ್ಕಳು. ಈ ಕೇಸಿನ ಬಗ್ಗೆ ಅವರಿಗೆ ಮಾಹಿತಿ ಇದೆ. ಮಹ್ಮದ ಹುಸೇನ ಮತ್ತು ಅಬ್ದುಲ ರಹೆಮಾನ ಇವರು ನನ್ನ ಹೆಸರಿಗೆ ಯಾವುದಾದರೂ ದಾನ ಪತ್ರ, ಖರಿದ ಪತ್ರ, ವಿಲ್ ನಾಮೆ ಬರೆದುಕೊಟ್ಟಿದ್ದಾರೆ ಪ್ರಶ್ನೆಗೆ ಸಾಕ್ಷಿ ನಾವೆಲ್ಲರೂ ಅಣ್ಣ ತಮ್ಮಂದಿರು ಕುಳಿತುಕೊಂಡು ಮಾತನಾಡಿ ಪಾಲು ಮಾಡಿಕೊಂಡು ನಮ್ಮ ಹೆಸರಿಗೆ ದಾವೆ ಜಮೀನನ್ನು ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ನನ್ನ ತಮ್ಮ ಈ ದಾವೆ ನಡೆಸಲು ಯಾವುದೇ ಅಧಿಕಾರ ಪತ್ರ ನೀಡಿಲ್ಲಾ. ನಮ್ಮ ತಂದೆ ದಿ: 18-02-1975 ರಂದು 2ನೇ ಪ್ರತಿವಾದಿ ರೂ. 2,250/- ಗೆ ದಾವಾ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಹಣ ಪಡೆದು ನೊಂದಾಯಿತ ವಲ್ಲದ ಖರಿದಿ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ . ಸದರಿ ಖರಿದಿ ಕರಾರು ಪತ್ರ ಬರೆದುಕೊಟ್ಟ ದಿ: 18-02-1975 ರಂದು ದಾವಾ ಜಮೀನನ್ನು 2ನೇ ಪ್ರತಿವಾದಿಗೆ ಸ್ವಾದೀನ ನೀಡಿದ್ದಾರೆ ಎಂದರೆ ಸರಿಯಲ್ಲ . ಕಂದಾಯ ಅಧಿಕಾರಿಗಳ ತಪ್ಪಿನಿಂದ ಕಳೆದ 40 ವರ್ಷಗಳಿಂದ ದಾವಾ ಜಮೀನುಗಳ ಪಹಣಿಯಲ್ಲಿ ನನ್ನ ಹೆಸರು ಬರುತ್ತಿದೆ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳ ತಪ್ಪಿನಿಂದ ನಮ್ಮ ಹೆಸರು ಪಹಣಿಯಲ್ಲಿ ಬಂದ ಕಾರಣ 2ನೇ ಪ್ರತಿವಾದಿ ಗಂಡ ಡಾ: ಶಾಂತರಾಜ ಇವರು ನಮ್ಮ ಗಮನಕ್ಕೆ ತಂದ ಆತನ ಹೆಸರಿಗೆ ಪಹಣಿ ಮಾಡಲು ನಾವೇ ಯಾವುದೇ ತಕರಾರು ಇಲ್ಲಾ ಎಂದು ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ . ದಾವಾ ಜಮೀನಿನ ಕಂದಾಯವನ್ನು ಕಟ್ಟುತ್ತಿದ್ದೇನೆ. ನನ್ನ ಬಳಿ ರಶಿದಿ ಇಲ್ಲಾ.

**ಅಸಲು ದಾವಾ ನಂಃ 40/2017**
**ಪಿ.ಡಬ್ಲ್ಯೂಃ 1,**

ದಾವಾ ಜಮೀನಿನ ಪಹಣಿಯಿಂದ ನಮ್ಮ ಹೆಸರು ತೆಗೆದು 15 ವರ್ಷಗಳಾಗಿವೆ ಎಂದರೆ ಸರಿಯಲ್ಲ . ದಾವಾ ಜಮೀನಿನನ್ನು ಮಾರಾಟ ಮಾಡಿದ್ದಕ್ಕೆ ನಾವು ಪಹಣಿಯನ್ನು ಪ್ರಶ್ನೆ ಮಾಡಿಲ್ಲಾ ಆದರೆ ಈಗ ದುರಾಸೆಯಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ದಾವಾ ಜಮೀನನ್ನು 1975 ರಿಂದ ಪ್ರತಿವಾದಿ ಮತ್ತು ಅವರ ಕುಟುಂಬ ಕಬ್ಜಾ ಹೊಂದಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ . ನಾನು ಸುಳ್ಳು ದಾವೆ ಸಲ್ಲಿಸಿ, ಖೊಟ್ಟಿ ದಾಖಲೆಗಳ ಮೇಲೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಈ ದಾವೆ ಸಲ್ಲಿಸಲು ಯಾವುದೇ ಅಧಿಕಾರ ಇಲ್ಲಾ ಎಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**